ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>ಆರ್.ಪಿ.ಸಂಖ್ಯೆ 57<br>ನಮೂನೆ ಸಂಖ್ಯೆ 4<br>(ಸಿವಿಲ್ ) |

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಚಿಕ್ಕಬಳ್ಳಾಪುರ.

ಎಸ್.ಸಿ. ಸಂಖ್ಯೆ: **77/2020**

| | |
|---|---|
| PW | 8 |
| CW | 12 |

ಸಾಕ್ಷಿಯನ್ನು ಕರೆಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ **03.03.2022**

ಸಾಕ್ಷಿಯ ಹೆಸರು : ಶರತ್ ಕುಮಾರ್
ತಂದೆಯ/ಗಂಡನ ಹೆಸರು : ಸುಬ್ರಮಣಿ
ವಯಸ್ಸು : 27 ವರ್ಷ
ಉದ್ಯೋಗ : ಶೀಘ್ರಲಿಪಿಗಾರ
ವಾಸಸ್ಥಳ : ಚಿಕ್ಕಬಳ್ಳಾಪುರ

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

**1.** ಮೃತ ನವೀನ್ ಕುಮಾರ್ ಗೊತ್ತು . ಅವರು ಚಿಕ್ಕಬಳ್ಳಾಪುರ ದ ಮೊದಲನೇ ಅಪಾರ ಸಿವಿಲ್ ನ್ಯಾಯಾಲಯದಲ್ಲಿ ಡಿ ಗ್ರೂಪ್ ನೌಕರನಾಗಿ ಕೆಲಸ ಮಾಡುತ್ತಿದ್ದರು. ಚಾಸಾ -1 ರಿಂದ 5 ಗೊತ್ತು. ಚಾಸಾ -6 ಗೊತ್ತಿಲ್ಲ. ಚಾಸಾ -7 ರಿಂದ 9 ಗೊತ್ತಿಲ್ಲ. ಚಾಸಾ -10 ಮೃತ ನವೀನ್ ಕುಮಾರ್ ನ ತಾಯಿ , ಚಾಸಾ -11 ಮೃತ ನವೀನ್ ಕುಮಾರ್ ನ ತಂಗಿ . ಚಾಸಾ -13 ಮೃತನ ನವೀನ್ ಕುಮಾರ್ ನ ಸಂಬಂಧಿಕರು. ಚಾಸಾ - 14 ರಿಂದ 24 ಗೊತ್ತಿಲ್ಲ. ಆರೋಪಿಗಳ ಪೈಕಿ 4 ನೇ ಆರೋಪಿ ಮಾತ್ರ ಗೊತ್ತು 4 ನೇ ಆರೋಪಿ ಅದೇ ನ್ಯಾಯಾಲಯದಲ್ಲಿ ಅಟೆಂಡರ್ ಕೆಲಸ ಮಾಡುತ್ತಿದ್ದರು. ಉಳಿದ ಆರೋಪಿಗಳು ಗೊತ್ತಿಲ್ಲ.

*PW:8CW:12*

*2. ಮೃತ ನವೀನ್ ಕುಮಾರ್ ತೀರಿಕೊಂಡು ಎರಡು ವರ್ಷಗಳಾಯಿತು. ದಿಃ 19.08.2020 ರಂದು ನವೀನ್ ಕುಮಾರ್ ತೀರಿಹೋಗಿದ್ದಾರೆ ಎಂದು ನ್ಯಾಯಾಲಯದ ಸಿಬ್ಬಂದಿ ಮೂಲಕ ಗೊತ್ತಾಯಿತು. ಅದೇ ದಿನ ಬೆಳಗಿನ ಜಾವ ಸರ್ಕಾರಿ ಆಸ್ಪತ್ರೆಯಲ್ಲಿ ನಾನು ಹೋಗಿ ಅತನ ಮೃತ ದೇಹ ನೋಡಿರುತ್ತೇನೆ. ನಾನು ನೋಡಿದಾಗ ನಾಲಿಗೆ ಕಚ್ಚಿ ರಕ್ತ ಬರುತ್ತಿತ್ತು , ಗಂಟಲು ಮತ್ತು ಗಡ್ಡ ಹತ್ತಿರ ಸಣ್ಣ , ಸಣ್ಣ ಗಾಯಗಳಾಗಿತ್ತು. ಆರೋಪಿಗಳು ಸೇರಿ ಅತನ ಕೊಲೆ ಮಾಡಿದಾದರೆ ಎಂದು ಟಿವಿಯ ಮೂಲಕ ಗೊತ್ತಾಯಿತು. ಕತ್ತು ಹಿಸುಕಿ ಸಾಯಿಸಿದ್ದಾರೆ ಎಂದು ಗೊತ್ತಾಯಿತು. 1 ನೇ ಆರೋಪಿ 4 ನೇ ಆರೋಪಿಯ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದ ಕಾರಣ ಹಳೇ ದ್ವೇಷದಿಂದ ನವೀನ್ ಕುಮಾರ್ ಸಾಯಿಸಿದ್ದಾರೆ ಎಂದು ಗೊತ್ತಾಯಿತು. 1 ನೇ ಆರೋಪಿ ಮೃತ ನವೀನ್ ಕುಮಾರ್ ನ್ನನ್ನು ಒಂದು ಸಲ 4 ನೇ ಆರೋಪಿಯ ಮನೆಯಲ್ಲಿ ನೋಡಿದ್ದರಂತೆ ಆ ದ್ವೇಷದಿಂದ ಮೃತ ನವೀನ್ ಕುಮಾರ್ ನ್ನನ್ನು ಕೊಲೆ ಮಾಡಿದ್ದಾರೆ ಎಂದು ಗೊತ್ತಾಯಿತು. ಈಗ ತೋರಿಸಿದ ನಿಪಿ -14 ಪೊಟೋ ಮೃತ ನವೀನ್ ಕುಮಾರ್ ನ ಪೊಟೋ ಆಗಿರುತ್ತದೆ.*

*<u>ಪಾಟೀಸವಾಲು : ಶ್ರೀ. ಹೆಚ್ . ಆರ್. ವಿ ವಕೀಲರಿಂದ, **2** ಮತ್ತು **3** ನೇ ಆರೋಪಿತರ ಪರವಾಗಿಃ</u>*

*3. ನಾನು ಮತ್ತು ಮೃತ ನವೀನ್ ಕುಮಾರ್ ಬಹಳ ವಿಶ್ವಾಸದಿಂದ ಇದ್ದೆವು ಎಂದರೆ ಸ ರಿ . ನಾನು ಅನೇಕ ಬಾರಿ ನವೀನ್ ಕುಮಾರ್ ನ ರೂಮಿಗೆ ಹೋಗಿ ಬಂದು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಟಿವಿಯಲ್ಲಿ ತೋರಿಸುವ ಮೊದಲು ನನಗೆ ಯಾರ ಮೇಲೆ ಯಾದರು ಶಂಕೆ ಇತ್ತು ಎಂದು ನಾನು ಪೊಲೀಸರಿಗೆ ಹೇಳಿರುವುದಿಲ್ಲ. ಆತ ತೀರಿಕೊಂಡ ಮಾರನೇ ದಿನ ಟಿವಿಯಲ್ಲಿ ನೋಡಿರುತ್ತೇನೆ.*

*PW:8CW:12*

***ಪಾಟೀಸವಾಲು : ಶ್ರೀ. ಕೆ. ಎನ್ . ಎಂ ವಕೀಲರಿಂದ, 1 ಮತ್ತು 4 ನೇ ಆರೋಪಿತರ ಪರವಾಗಿಃ***

*4. ಮೃತ ನವೀನ್ ಕುಮಾರ್ ಒಳ್ಳೆಯವನಾಗಿದ್ದು, ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ಆತನ ಬಗ್ಗೆ ದೂರುಗಳು ಮತ್ತು ವಿಷಯಗಳು ಕೇಳಿರುವುದಿಲ್ಲ. ಆತನಿಗೆ ನಾನು ಯಾವುದೇ ಸಲಹೆ ನೀಡಿರುವುದಿಲ್ಲ. ಅಕ್ರಮ ಸಂಬಂಧದ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಮೃತ ನವೀನ್ ಮತ್ತು 4 ನೇ ಆರೋಪಿ ಮನೆಯಲ್ಲಿ ಇದ್ದ ವಿಚಾರ ಟಿವಿಯಲ್ಲಿ ನೋಡಿ ಗೊತ್ತಾಯಿತು. ಅದನ್ನು ನಾನು ಪೊಲೀಸರಿಗೆ ಹೇಳಿಲ್ಲ. ನಿಪಿ -14 ಪೊಟೋವನ್ನು ಸರ್ಕಾರಿ ಆಸ್ಪತ್ರೆಯಲ್ಲಿ ತೆಗೆದಿರುತ್ತಾರೆ. ಆಗ ಮರಣೋತ್ತರ ಪರೀಕ್ಷೆ ಮಾಡಿದ ವೈಧ್ಯರು ನಾವು ಇದ್ದೆವು , ಅದನ್ನು ಪೊಟೋ ಗ್ರಾಫರ್ ತೆಗೆದಿರುತ್ತಾರೆ. ಬೇರೆ ಯಾರು ಇದ್ದರೋ ನೆನಪಿಲ್ಲ. ನಾನು ಅಲಿ ಇರುವುದು ಯಾವುದೇ ವಿಶೇಷ ಕಾರಣ ಇರುವುದಿಲ್ಲ, ವಿಷಯ ತಿಳಿದು ಅಲ್ಲಿಗೆ ಹೋಗಿದ್ದೆ . ನಾನು ಅಲ್ಲದೆ ನ್ಯಾಯಾಲಯದ ಸಿಬ್ಬಂದಿಯಾದ ಚಾಸಾ -5 ಅಲಿ ಇದ್ದರು. ಚಾಸಾ -5 ರವರ ಜೊತೆ ನಾನು ಸಹಾ ಅದೇ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ನಾನು ಎಲ್ಲಿಗೂ ಹೋಗಿರಲಿಲ್ಲ ಪೊಲೀಸರು ಬನಾವಟ್ಟು ಮಾಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ತೊಂದರೆ ಆಗಲೀ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.*

***ಮರುವಿಚಾರಣೆಃ ಇಲ್ಲ.***

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 03.03.2022 ರಂದು ಬೆರಳಚ್ಚುಗಾರ್ತಿಯಿಂದ ಬೆರಳಚ್ಚು ಮಾಡಿಸಲಾಯಿತು.)*

*ಓದಿ ಹೇಳಿ ಕೇಳಿ ಸರಿ ಇದೆ*

*ಸಹಿ/-*
*ಮೂರನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,*
*ಚಿಕ್ಕಬಳ್ಳಾಪುರ.*

*PW:8CW:12*